ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 18/12/2020

# ಮೇಯರ್ ಚುನಾವಣೆ: 12 ಎಂಎಲ್ಸಿಗಳ ವಿಳಾಸ ವಿವಾದ

## ವಿಳಾಸ ನಕಲಿ: ಕಾಂಗ್ರೆಸ್ | ಸರಿ ಇದೆ: ತೇಜಸ್ವಿನಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಫೆ.19ಕ್ಕೆ ದಾವಣಗೆರೆ ಪಾಲಿಕೆಗೆ ಮೇಯರ್-ಉಪಮೇಯರ್ ಚುನಾವಣೆ ನಡೆಯಲಿದ್ದು ಇದರ ಬೆನ್ನಲ್ಲೇ ಮತದಾರರ ಪಟ್ಟಿಯಲ್ಲಿರುವ 14 ವಿಧಾನ ಪರಿಷತ್ ಸದಸ್ಯರಲ್ಲಿ 12 ಜನರು ನಕಲಿ ವಿಳಾಸ ನೀಡಿದ್ದಾರೆಂಬ ಆರೋಪ ಕೇಳಿ ಬಂದಿದೆ. ಆದರೆ ತಮ್ಮ ವಿಳಾಸ ಸರಿ ಇದೆ ಎಂದು ಎಂಎಲ್‌ಸಿಗಳು ಹೇಳಿದ್ದಾರೆ.



ದಾವಣಗೆರೆ ಮಹಾನಗರ ಪಾಲಿಕೆಗೆ ಸದಸ್ಯರಾಗಿ ಆಯ್ಕೆಯಾದವರು 45, ಒಬ್ಬ ಸಂಸದರು, ಇಬ್ಬರು ಶಾಸಕರು ಮತ್ತು 14 ಜನ ಎಂಎಲ್‌ಸಿಗಳು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿದ್ದರು. ಆದರೆ, ಬಿಜೆಪಿ ಎಂಎಲ್‌ಸಿಗಳು ನಕಲಿ ವಿಳಾಸ ನೀಡಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ದೂರು ನೀಡಿತ್ತು. ಈ ದೂರಿನ ಹಿನ್ನೆಲೆಯಲ್ಲಿ ಚುನಾವಣಾ ವೀಕ್ಷಕರಾದ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಹರ್ಷ ಗುಪ್ತಾ ಮತದಾರರ ಪಟ್ಟಿಯನ್ನು ಪರಿಶೀಲಿಸಿದ್ದಾರೆ. ಈ ವೇಳೆ ಕಾಂಗ್ರೆಸ್‌ನ ಕೆ.ಅಬ್ದುಲ್ ಜಬ್ಬಾರ್ ಮತ್ತು ಮೋಹನ ಕುಮಾರ ಕೊಂಡಜ್ಜಿ ಮಾತ್ರ ದಾವಣಗೆರೆ ನಿವಾಸಿಗಳೆಂಬುದು ಪ್ರಾದೇಶಿಕ ಆಯುಕ್ತರ ಗಮನಕ್ಕೆ ಬಂದಿದೆ.

ಉಳಿದಂತೆ ಕಾಂಗ್ರೆಸ್‌ನ ಎಂಎಲ್‌ಸಿಗಳಾದ ಯು.ಬಿ. ವೆಂಕಟೇಶ್, ಕೆ.ಸಿ.ಕೊಂಡಯ್ಯ, ಎಚ್.ಎಂ.ರೇವಣ್ಣ, ಜಿ.ರಘು ಆಚಾರ್, ಬಿಜೆಪಿಯ ಎಂಎಲ್‌ಸಿಗಳಾದ ನಂಜುಂಡಿ, ಲೇಹರ್ ಸಿಂಗ್, ವೈ.ಎ.ನಾರಾಯಣಸ್ವಾಮಿ, ಎನ್.ರವಿಕುಮಾರ, ತೇಜಸ್ವಿನಿ ಗೌಡ, ಎಸ್. ರುದ್ರೇಗೌಡ, ಡಿ.ಯು.ಮಲ್ಲಿಕಾರ್ಜುನ, ಹನುಮಂತ ನಿರಾಣಿ ವಿಳಾಸದ ಬಗ್ಗೆ ಅನುಮಾನ ಮೂಡಿದೆ ಎನ್ನಲಾಗಿದೆ. ಈ ಬಗ್ಗೆ ಪ್ರಾದೇಶಿಕ ಆಯುಕ್ತರು ಚುನಾವಣಾ ಆಯೋಗಕ್ಕೆ ವರದಿ ನೀಡಲಿದ್ದಾರೆ ಎಂದು ತಿಳಿದುಬಂದಿದೆ.

**ನಾನು ಕೊಟ್ಟಿರುವ ವಿಳಾಸ ಸರಿಯಾಗಿದೆ. ವಿಧಾನಪರಿಷತ್ ಚುನಾವಣೆಯ ವೀಕ್ಷಕರು ಪರಿಶೀಲನೆ ನಡೆಸಿರುವ ಬಗ್ಗೆ ಅಥವಾ ಚುನಾವಣಾ ಆಯೋಗಕ್ಕೆ ವರದಿ ನೀಡುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.**

• **ಡಾ.ತೇಜಸ್ವಿನಿಗೌಡ** ವಿಧಾನಪರಿಷತ್ ಬಿಜೆಪಿ ಸದಸ್ಯೆ

**ಯಾವುದೇ ಚುನಾವಣೆಗೂ ಮುನ್ನ ತಾವು ಮತ ಚಲಾಯಿಸುವ ಕ್ಷೇತ್ರವನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಸಾಮಾನ್ಯ ಮತದಾರರಿಗೆ ಇದೆ. ವಿಳಾಸ ಬದಲಾವಣೆ ಹಿನ್ನೆಲೆಯಲ್ಲಿ ಇಂತಹ ಬದಲಾವಣೆಯನ್ನು ಮತದಾರರು ಮಾಡಿಕೊಳ್ಳಬಹುದು. ಅದೇ ರೀತಿ ಶಾಸಕರಿಗೂ ತಾವು ಮತ ಹಾಕುವ ಕ್ಷೇತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಇದು ಸರಿಯಿಲ್ಲ ಎಂದಾದರೆ ಚುನಾವಣೆ ಆಯೋಗ ಈ ನೀತಿಗೆ ತಿದ್ದುಪಡಿ ತರಲಿ.**

• **ಎಚ್.ಎಂ. ರೇವಣ್ಣ**, ಕಾಂಗ್ರೆಸ್ ಎಂಎಲ್‌ಸಿ

10